<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No. 295/2017
CW-13 PW- 11

ಹೆಸರು : ಚಂದ್ರಕಾಂತ್

ತಂದೆಯ ಹೆಸರು: ಅಂಬಾರಾಯ್ ಮಕಾಳೆ

ವಯಸ್ಸು : 56 ವರ್ಷ

ಉದ್ಯೋಗ : ಪಿ.ಎಸ್.ಐ. ಶಹಬಾದ್

ವಾಸ ಸ್ಥಳ : ಶಹಬಾದ್

---

<u>ಪ್ರಮಾಣವಚನ ಬೋಧಿಸಲಾಯಿತು. ದಿಃ 29-01-2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು 2016 ರಿಂದ 2018 ರವರೆಗೆ ಕಾಳಗಿ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ: 02-05-2017ರಂದು ಚಾಸಾ-12ರವರಿಂದ ಕಡತ ಪಡೆದು ಮುಂದಿನ ತನಿಖೆಯನ್ನು ಮಾಡಿರುತ್ತೇನೆ.

ಅದೇ ದಿನ ಗುನ್ನೆ ಸ್ಥಳದ ಪಂಚನಾಮೆಯನ್ನು ಚಾಸಾ-2 ಮತ್ತು 3ರವರ ಸಮಕ್ಷಮ ಮಧ್ಯಾಹ್ನ 2 ರಿಂದ 3 ಗಂಟೆ ಸಮಯದಲ್ಲಿ ಜರುಗಿಸಿರುತ್ತೇನೆ. ಅದೇ ದಿನ ಚಾಸಾ-4 ರಿಂದ 11 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ 3ನೇ ಆರೋಪಿತನನ್ನು ದಸ್ತಗಿರಿ ನಿಯಮ ಪಾಲಿಸಿ ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆನೆ.

ದಿನಾಂಕ: 31-05-2017ರಂದು 1 ಮತ್ತು 2ನೇ ಆರೋಪಿತರು ಮಾನ್ಯ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು, ಅವರನ್ನು ದಸ್ತಗಿರಿ ನಿಯಮ ಪಾಲಿಸಿ ಸೂಕ್ತ

ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ. ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾ ಧಾರಗಳು ಸಿಕ್ಕ ಕಾರಣ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ನಾನು ಜರುಗಿಸಿದ ಸ್ಥಳ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಸ್ಥಳ ಪಂಚನಾಮೆಯು ಈಗಾಗಲೇ ನಿಶಾನೆ ಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-2(ಬಿ) ಎಂದು ಗುರುತಿಸಲಾಯಿತು. ನಾನು ಪಡೆದ ಸಾಕ್ಷಿದಾರರ ಹೇಳಿಕೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳು ಈಗಾಗಲೇ ನಿಶಾನೆ ಪಿ-3 ರಿಂದ ಪಿ-7 ಎಂದು ಗುರುತಿಸಲಾಗಿದೆ. ಸಾಕ್ಷಿದಾರರು ನನ್ನ ಸಮಕ್ಷಮವೇ ಸದರಿ ಹೇಳಿಕೆಗಳನ್ನು ನೀಡಿರುತ್ತಾರೆ.

ನಾನು ಚಾಸಾ-12ರವರ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈಗ ಪ್ರವರ್ತಮಾನ ವರದಿಯ ಮೇಲೆ ಇರುವ ಚಾಸಾ-12ರವರ ಸಹಿಯನ್ನು ನೋಡಿ ಗುರುತಿಸಿದ ಕಾರಣ, ಸದರಿ ಪ್ರವರ್ತಮಾನ ವರದಿಯನ್ನು ನಿಶಾನೆ ಪಿ-8 ಎಂದು ಗುರುತಿಸಲಾಯಿತು. ಇಂದು ನ್ಯಾಯಾಲಯದ ಮುಂದಿರುವ ಆರೋಪಿತರು ನಾನು ವಶಕ್ಕೆ ಪಡೆದ ಆರೋಪಿತರಾಗಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಜಿ.ಎಸ್. ವಕೀಲರಿಂದ -</u>

ನಮ್ಮ ಕಡತದ ಪ್ರಕಾರ ಚಾಸಾ-1ರವರು ಬೆರಳಚ್ಚು ಮಾಡಿದ ದೂರನ್ನು ನಮ್ಮ ಠಾಣೆಯಲ್ಲಿ ಸಲ್ಲಿಸಿರುತ್ತಾರೆ. ನಿಮ್ಮ ತನಿಖೆಯಲ್ಲಿ ಚಾಸಾ-1ರವರು ನೀಡಿದ ದೂರನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ಕಾಳಗಿ ಪೊಲೀಸ ಠಾಣೆಯಿಂದ ಕಂದಗೂಳ ಗ್ರಾಮವು ಸುಮಾರು 18 ರಿಂದ 20 ಕಿ.ಮೀ ದೂರದಲ್ಲಿದೆ ಎಂದರೆ ಸಾಕ್ಷಿಯು 10-12 ಕಿ.ಮೀ ದೂರದಲ್ಲಿದೆ ಎಂದು ನುಡಿಯುತ್ತಾರೆ. ಕಂದಗೂಳ ಗ್ರಾಮದಿಂದ 3 ಕಿ.ಮೀ. ದೂರದಲ್ಲಿ ನಿಮ್ಮ ಠಾಣೆಯ ಔಟಪೋಸ್ಟ್ ಇದೆ ಎಂದರೆ ಸರಿ. ಸದರಿ ಔಟಪೋಸ್ಟ ಬಳಿ ಘಟನೆಯಾದರೆ ಅವರಿಗೆ ಮೊದಲು ತಿಳಿಯುತ್ತದೆ ಎಂದರೆ ಸರಿ. ನಿಮಗೆ ಸದರಿ ಔಟಪೋಸ್ಟನಿಂದ ಈ ಘಟನೆ ಕುರಿತು ಯಾವುದೇ ಮಾಹಿತಿ ಬಂದಿಲ್ಲ ಎಂದರೆ ಸರಿ. 1ನೇ ಆರೋಪಿತ ಗ್ರಾಮ ಪಂಚಾಯತಿಯ ಸದಸ್ಯನಾಗಿದ್ದ ಎಂದರೆ ಸರಿ. ನಿಮ್ಮ ತನಿಖೆಯಲ್ಲಿ ಚಾಸಾ-1ರ ಮೇಲೆ 1ನೇ ಆರೋಪಿತ ಹಣದ ಅವ್ಯವಹಾರದ ಕುರಿತು ಆಗಾಗ ತಕರಾರು ಮಾಡುತ್ತಿದ್ದ ಎಂದು ಕಂಡುಬಂತು

ಎಂದರೆ ಸರಿಯಲ್ಲ. ಸದರಿ ವಿಷಯದ ಕುರಿತು ಸಾಕ್ಷಿದಾರರು ನಿಮಗೆ ತಿಳಿಸಿದ್ದರೂ ಸಹ ನೀವು ಅದನ್ನು ನಿಮ್ಮ ಅಂತಿಮ ವರದಿಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

ನೀವು ಎಂದಿಗೂ ಪಂಚರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಯಾಂತ್ರಿಕವಾಗಿ ತನಿಖೆ ಮಾಡಿ ಆರೋಪಿತರು ಯಾವುದೇ ಗುನ್ನೆ ಮಾಡಿಲ್ಲ ಎಂದು ಕಂಡುಬಂದರೂ ಸಹ ಚಾಸಾ-1 ಸರಕಾರಿ ಅಧಿಕಾರಿ ಎಂದು ತಿಳಿದು, ಆರೋಪಿತರ ವಿರುದ್ಧ ತಪ್ಪಾಗಿ ಅಂತಿಮ ವರದಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಗುನ್ನೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.

<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No. 295/2017
CW-11 PW-10

ಹೆಸರು : ಈರಣ್ಣ

ತಂದೆಯ ಹೆಸರು: ಸಾಯಿಬಣ್ಣ ಮದನಿಕರ್

ವಯಸ್ಸು : 53 ವರ್ಷ

ಉದ್ಯೋಗ : ಬಿಲ್ ಕಲೆಕ್ಟರ್

ವಾಸ ಸ್ಥಳ : ಕಂದಗೂಳ, ತಾ: ಕಾಳಗಿ.

---

<u>ಪ್ರಮಾಣವಚನ ಬೋಧಿಸಲಾಯಿತು. ದಿಃ 29-01-2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು 2002ರಿಂದ ಇಲ್ಲಿಯವರೆಗೆ ಕಂದಗೂಳ ಗ್ರಾಮದಲ್ಲಿ ಬಿಲ್ ಕಲೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನನಗೆ ಚಾಸಾ-1ರವರ ಪರಿಚಯ ಇದೆ. ನನಗೆ ಚಾಸಾ-4 ರಿಂದ 10 ರವರ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇದೆ.

ದಿಃ 29.04.2017ರಂದು ಬಸವ ಜಯಂತಿ ಆಚರಣೆಯನ್ನು ನಮ್ಮ ಕಛೇರಿಯಲ್ಲಿ ಮಾಡಿರುತ್ತೇವೆ. ಆಚರಣೆ ಆದ ನಂತರ 1ನೇ ಆರೋಪಿತ ಬಸವ ಜಯಂತಿ ಆಚರಣೆ ಮಾಡಲು ಹಣ ನೀಡಬೇಕು ಎಂದು ಚಾಸಾ-1ರವರಿಗೆ ಕೇಳಿಕೊಂಡರು. ಆಗ ಚಾಸಾ-1ರವರು ಕೇವಲ ಎಸ್.ಸಿ. ಎಸ್.ಟಿ ಜನಾಂಗದ ಜನರಿಗೆ ಮಾತ್ರ ಸರಕಾರದ ವತಿಯಿಂದ ಆಚರಣೆ ಮಾಡಲು ಹಣ ನೀಡಲಾಗುತ್ತದೆ, ಬಸವ ಜಯಂತಿಗೆ ನೀಡಲಾಗುವುದಿಲ್ಲ ಎಂದು ಹೇಳಿದಾಗ ಚಾಸಾ- 1 ಮತ್ತು ಆರೋಪಿತರ ನಡುವೆ ಮಾತಿನ ಚಕಮಕಿ ಆಗಿರುತ್ತದೆ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು  ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು  ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು  ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ  ಪಾಟೀ ಸವಾಲಿಗೆ ಅನುಮತಿ  ನೀಡಲಾಯಿತು.)

<u>ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ</u>

ದಿಃ 29.04.2017ರಂದು ಬೆಳಿಗ್ಗೆ 09.00 ಗಂಟೆಗೆ ನಾನು, ಚಾಸಾ-1, 4 ರಿಂದ 10 ರವರು ಸೇರಿ ಕಂದುಗುಳು ಗ್ರಾಮದಲ್ಲಿ ಬಸವ ಜಯಂತಿ ಆಚರಿಸಿದ್ದೇವೆ ಎಂದರೆ ಸರಿ.  ಸದರಿ ಆಚರಣೆ ಆದ ನಂತರ ಅಲ್ಲಿ ಸೇರಿದ ಜನರಿಗೆ ಚಹಾ ಮತ್ತು ಬಿಸ್ಕೆಟ್ ವ್ಯವಸ್ಥೆ ಮಾಡಲಾಗಿತ್ತು ಎಂದರೆ ಸರಿ.  ಆಗ ಆರೋಪಿತರು ಬಸವ ಜಯಂತಿಗೆ ಸರಕಾರದವರು ಹಣ ನೀಡುತ್ತಾರೆ ಆದ ಕಾರಣ ಸದರಿ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳಿದರು ಎಂದರೆ ಸರಿ.  ಆಗ ಚಾಸಾ-1ರವರು ಬಸವ ಜಯಂತಿ ಆಚರಿಸಲು ಯಾವುದೇ ಹಣ ಬಿಡುಗಡೆ ಆಗಿಲ್ಲ ಕೇವಲ ಎಸ್.ಸಿ ಎಸ್.ಟಿ ಜನಾಂಗದವರ ಆಚರಣೆಗೆ ಮಾತ್ರ ಹಣ ಬಿಡುಗಡೆ ಮಾಡಬಹುದು ಎಂದು ಹೇಳಿದರು ಎಂದರೆ ಸರಿ.  ಆಗ ಆರೋಪಿತರೆಲ್ಲರೂ ಸೇರಿ ಚಾಸಾ-1ರವರಿಗೆ ಕುರ್ಚಿಯಿಂದ ದಬ್ಬಿ ನೀನು ಅಯೋಗ್ಯ ಇದ್ದೀಯಾ ನಿನ್ನ ಅಂಗಿ ಪ್ಯಾಂಟ್ ಬಿಚ್ಚಿಸಿ ಮೆಟ್ಟು ಕಟ್ಟಿ ಮೆರವಣಿಗೆ ಮಾಡಬೇಕೆಂದು ಅವಾಚ್ಯವಾಗಿ ಬೈದರು ಎಂದರೆ ಸರಿ. ನೀವು ಆಗ ಜಗಳ ಬಿಡಿಸಿದ್ದೀರಿ ಎಂದರೆ ಸರಿ.  1ನೇ ಆರೋಪಿತ ಚಾಸಾ-1ರವರ ಕೈಯಲ್ಲಿದ್ದ ಮೊಬೈಲನ್ನು ಕಸಿದು ಪಿ.ಡಿ.ಓ. ಕುರ್ಚಿಯ ಮೇಲೆ ಕೂಡಬೇಡ ಎಂದು ಹೇಳಿ ನೆಲದ ಮೇಲೆ ಕೂಡು ಎಂದು ಹೇಳಿದ ಎಂದರೆ ಸರಿಯಲ್ಲ.  ಘಟನೆಯ ಕುರಿತು ಪೋಲೀಸರು  ಬಂದು ಎಲ್ಲರಿಗೂ ತಿಳಿ ಹೇಳಿ ಚಾಸಾ-1ರವರು ದೂರು ನೀಡಿದ ಬಗ್ಗೆ ನಿಮಗೆ ತಿಳಿದು ಬಂತು ಎಂದರೆ ಸರಿ.  ನೀವು ಆ ಕಾರಣ ದಿಃ 02.05.2017ರಂದು ನಿಮ್ಮ ಹೇಳಿಕೆಯನ್ನು ಪೋಲೀಸರಿಗೆ ನೀಡಿದ್ದೀರಿ ಎಂದರೆ ಸರಿ.  ನೀವು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರು ಅವಾಚ್ಯವಾಗಿ ಬೈದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ  ಆರೋಪಿತರ ಪರ ಶ್ರೀ.ಜಿ.ಎಸ್. ವಕೀಲರಿಂದ -</u>

ಬಸವ ಜಯಂತಿಯ ಆಚರಣೆಯನ್ನು ಕೇವಲ ಗ್ರಾಮ ಪಂಚಾಯತ್ ಸದಸ್ಯರು ಮತ್ತು ಅಧಿಕಾರಿಗಳು ಸೇರಿ ಮಾಡುತ್ತಾರೆ ಎಂದರೆ ಸಾಕ್ಷಿ ಸಾರ್ವಜನಿಕರು ಸಹ ಬರಬಹುದೆಂದು ನುಡಿಯುತ್ತಾರೆ.  ಯಾವುದೇ ಜಯಂತಿ ಆಚರಣೆ ಮಾಡಲು ಹಣದ ಬಗ್ಗೆ ವಿಚಾರ ಬಂದಾಗ ಕೇವಲ

ಗ್ರಾಮ ಪಂಚಾಯತ್ ಸದಸ್ಯರು ಮತ್ತು ಅಧಿಕಾರಿಗಳು ಸೇರಿ ಮೀಟಿಂಗ್ ಮಾಡುತ್ತೀರಿ ಎಂದರೆ ಸರಿ. 2 ಮತ್ತು 3ನೇ ಆರೋಪಿತರು ಗ್ರಾಮ ಪಂಚಾಯತಿ ಸದಸ್ಯರಲ್ಲ ಎಂದರೆ ಸರಿ. ನೀವು ಮೀಟಿಂಗ್ ನಲ್ಲಿ ಸದಸ್ಯ ಇಲ್ಲದಿದ್ದರೆ ಅವರಿಗೆ ಒಳಗೆ ಬಿಡುವುದಿಲ್ಲ ಎಂದರೆ ಸರಿ. 1ನೇ ಆರೋಪಿತ ನಿಮ್ಮ ಗ್ರಾಮ ಪಂಚಾಯತಿಯ ಸದಸ್ಯನಾಗಿದ್ದ ಎಂದರೆ ಸರಿ. ಯಾವುದೇ ಜಯಂತಿ ಅಥವಾ ಕಾರ್ಯಕ್ರಮ ಆಚರಣೆ ಮಾಡಬೇಕಾದರೆ ಗ್ರಾಮ ಪಂಚಾಯತಿ ಸದಸ್ಯರೇ ಅದರ ಬಗ್ಗೆ ಅನುಮೋದನೆ ಮಾಡಬೇಕೆಂದರೆ ಸರಿಯಲ್ಲ. ಗ್ರಾಮ ಪಂಚಾಯತಿ ಸದಸ್ಯರೇ ಸದರಿ ಆಚರಣೆಗೆ ಎಷ್ಟು ಹಣ ಬೇಕೆಂದು ಹೇಳುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಚಾಸಾ-1ರವರು ಸರಿಯಾಗಿ ಲೆಕ್ಕಪತ್ರ ಇಡುತ್ತಿಲ್ಲ ಎಂದು 1ನೇ ಆರೋಪಿತ ಅವರ ಮೇಲೆ ಮೇಲಿಂದ ಮೇಲೆ ಆರೋಪ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ದುರುದ್ದೇಶ ಇಟ್ಟುಕೊಂಡು ಚಾಸಾ-1ರವರು ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ನೀವು ಪೋಲೀಸರ ಸಮಕ್ಷಮ ನೀಡಿರುವ ಹೇಳಿಕೆಯಲ್ಲಿ ಏನು ಬರೆಯಲಾಗಿದೆ ಎಂದು ನಿಮಗೆ ಮಾಹಿತಿ ಇಲ್ಲ ಎಂದರೆ ಸರಿ. ಆರೋಪಿತರು ಎಂದಿಗೂ ನಿಮ್ಮ ಸಮಕ್ಷಮ ಚಾಸಾ-1ರವರಿಗೆ ಕುರ್ಚಿಯಿಂದ ದಬ್ಬಿಲ್ಲ, ಮತ್ತು ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿ. ನನಗೆ ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನಿನ್ನೆ ಪೋಲೀಸರು ಹೇಳಿದ ನಂತರ ಗೊತ್ತಾಗಿದ್ದು ಆದ ಕಾರಣ ನಾನು ಇಂದು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.